ಹೊದ್ದುಕೊಂಡಿದ್ದ ಕಂಬಳಿಯ ಮೊಖದ ಮೇಲಿಂದ ತೆಗದು ಪಿಳಿಪಿಳಿ ಕಣ್ಣಾಡಿಸುವಾಗ ಮೆಲ್ಲನೆ ಎದೆ ಧಸಕ್ಕೆಂದಿತ್ತು. ಆಗಲೆ ಬೆಳಕರಿದು ಸ್ವಾಮಿ ಜಗತ್ತಿನ ಜೀವರಾಶಿಗಳ ವ್ಯಾಲೆ ತನ್ನ ಕರುಣೆಯೆಂಬೋ ಕರುಣೆಯ ಕಿರಣಗಳ ಮೂಲಕ ವೂರ ತುಂಬೆಲ್ಲಾ ಚೆಲ್ಲಾಡಿ ಬಿಟ್ಟವನೆ! ಕೊಟ್ಟಿಗೆಯಾಗಿನ ಯೆಮ್ಮೆ, ದನ, ಕರಗಳು ವಟ್ಟೆ ಹಸಿವಿನಿಂದಲೋ, ನೀರಡಿಕೆಯಿಂದಲೋ ವಿವಿಧ ಸ್ವೊರಗಳ ವರಡಿಸಿ ದಸಮುಸ ಅನ್ನುತ್ತಿವೆ. ಮಲ್ಲ ಬುಡಕ್ಕನೆಯೆದ್ದು ಕುಂತ. ಹನ್ನೆರಡು ಕಂಬದ ಹಟ್ಟಿಯ ತೊಟ್ಟಿಯನ್ನೆಲ್ಲಾ ಎಳೆಬಿಸಿಲು ಬೆಳಗುತ್ತಿದೆ! ಮಲ್ಲನಿಗೆ ಯಾಕೋ ಆ ಬೆಳಗು ಎಂದಿನ ಬೆಳಗಿನಂತಲ್ಲ ಎಂದು ಅನ್ನಿಸಹತ್ತಿತ್ತು. ಇಷ್ಟೊತ್ತಿನಗಂಟಾ ತನಗೆ ಮನಗಲು ಅವುಕಾಸವಿತ್ತಾ?! ಚುಮುಚುಮು ನಸುಕು ನಸೆನಸೆ ಮಾಡುತ್ತಿರುವಾಗಲೇ ಅವನು ಮೈಮ್ಯಾಲಿನ ಕಂಬಳಿಯ ಮತ್ತಷ್ಟು ಮೋರೆ ಮ್ಯಾಲೆ ಎಳಕಂಡು ಕಾಲುಗಳ ಕೊಕ್ಕರಿಸಿ ವಟ್ಟೆಗೆ ವತ್ತಿಕೊಂಡು ಮನಗಲೆತ್ನಿಸುತ್ತಿದ್ದ. ಹಾಗೆ ಮಲಗುತ್ತಾ ಅವನು ಎರಡನೇ ನಿದ್ದೆಗೆ ಇಳಿಯತೊಡಗುತ್ತಿದ್ದಾನೆ ಯೆಂಬುದ ಅದ್ಯಾವ ಮಾಯದಾಗೆ ಕಂಡುಕೊಳ್ಳುತ್ತಿದ್ದರೋ ಏನೋ ಮಾಯ್ಕಾರ ಮಾದಯ್ಯನೋರು!

"ಇದ್ಯಾಕುಡಾ ಮಲ್ಲ ಮತ್ತೆ ಮುದರ್‌ಕಂಡು ಮನಿಕಳ್ಳಾಕ್ ವಂಟಿದ್ದೀ. ಕೊಟ್ಗಾಕೆಲ್ಸ ಮುಗ್ಸಿ ಗದ್ದೆ, ವಲದಕಡೆ ಬಂದಗಿಂದಯ್ಯೋ ಇಲ್ವೋ" ಕಿರುಕ್ವಾಣೆಯ ಪಕ್ಕದಾಗಿನ ಕಬ್ಬಿಣದ ಪೆಟ್ಟಿಗೆ ಬಳಿಯೇ ಹಾಕಿದ್ದ ಘನುವಾದ ಕಪ್ಪಾನೆ ಕಪ್ಪುಮಂಚ ವೊಮ್ಮೆ ಕಿರುಗುಟ್ಟುವಂಗೆ ಮಗ್ಗುಲಾಗಿ ಮಾದಯ್ಯನೋರು ಒಂದು ಆವಾಜು ಹಾಕುತ್ತಿದ್ದರು. ಯಿಡೀ ರಾತ್ರಿ ಮಾತನಾಡದೆಯೇ ಮನಗಿರುತ್ತಿದ್ದ ಕಾರಣಕ್ಕೆ

ಯೇನೋ ಮೊದಲೇ ಗಡುಸಾದ ದನಿ ಮತ್ತಷ್ಟು ಗಡುಸಾಗಿ ಗೊಗ್ಗರಾಗಿ ಕೇಳಿಸುತ್ತಿತ್ತು. ಮಲ್ಲ ಅದು ಯೆಂಥದೇ ಚಳಿಯಿರಲಿ ಮಳೆಯಿರಲಿ ಪಟಕ್ಕನೆದ್ದು ಬಿಡುತ್ತಿದ್ದ.

"ಯೆದ್ದೇಳ್ತಾ ಅವ್ವಳಿ" ಕೀರಲಿನ ಸಣ್ಣ ದನಿ ವರಡಿಸುತ್ತಾ ಕಂಬಳಿ ಮಡಚಿ, ಈಚಲು ಚಾಪೆಯ ಸುತ್ತಿ, ನುಣ್ಣೆದಿಂಬ ಎತ್ತಿ ಮೂಲೆಯಲ್ಲಿ ಪೇರಿಸಿಟ್ಟ ಭತ್ತದ ಮೂಟೆಗಳ ಮ್ಯಾಲೆ ಇಟ್ಟು ದಿನದ ದುಡಿತಕ್ಕೆ ಇಳಿಯುತ್ತಿದ್ದ. ಮಾದಯ್ಯನೋರಾ ಆವಾಜು ಮಲ್ಲನೊಬ್ಬನನ್ನು ಮಾತ್ರ ಯೆಬ್ಬಿಸುತ್ತಿರಲಿಲ್ಲ. ಅವನೊಟ್ಟಿಗೆ ಮಲ್ಲನ ಒಡತಿ ಮಾದೇವಮ್ಮನನ್ನೂ ಯೇಳಿಸುತ್ತಿತ್ತು. ಮಾದೇವಮ್ನೋರಾ ಅತ್ತೆಯ್ಯನೋರು "ಇದ್ಯಾಕ ಮಾದೇವಿ, ನೀನೂ ಯೆದ್ದೇಳ್ತಾ ಇದ್ದಯಿ. ಇನ್ನೊಸಿಹೊತ್ತು ಮನಿಕ್ಕಾ. ಯೆದ್ದಮ್ಯಾಗೆ ಇದ್ದದೇಯೇ. ಬಡ್‌ಪೆಟ್ಗೆಗೆ ಮುಗ್ದಾತ ಈ ಹಟ್ಟಿ ವಗ್ತನ. ಕೂಸು ಬ್ಯಾರೆ ಎದ್ದ್‌ಬುಡ್ತದೆ...." ನುಡಿಯುತ್ತಿದ್ದಂತೆಯೇ ಆ ಕೂಸು ಯೇಳಿಕೊಟ್ಟಂಗೆ ಅವ್ವನ ಶಾಖ ತನ್ನ ಮೈಯ್ಯ ಬುಟ್ಟುಹೋದ ಕಾರಣಕ್ಕೋ ಯೇನೋ ಕಿಟ್ಟನೆ ಕಿರುಚಿ ಅಳಲು ಆರಂಭಿಸುತ್ತಿತ್ತು.

"ನಾ ಯೋಳ್ನಿಲ್ವಾ ಮಾದೇವಿ..." ಅತ್ತೆ ಪಾರೋತವ್ವರಾ ಮಾತು ಮುಗಿಯುವಷ್ಟರಲ್ಲಿ ಮಾದಯ್ಯೋರಾ ಗಡಸು ಧ್ವನಿ ಕೇಳಿಸುತ್ತಿತ್ತು: "ಯೆಂಥ ಹೆಂಗುಸ್ರಾ ನೀವು. ವಂದ್ ಕೂಸ್ ಸುಧಾರಿಸಕ್ಕೆ ಬರ್ದೇ ಇರಾರು. ಮನೆ ಗಂಡ್ಸು ಮಲಗಿರಾ ಗ್ಯಾನ ಬ್ಯಾಡವಾ ಮಾಳಾದೋವಾ"

ಮಾದೇವಮ್ನೋರಾ ಮೈ ಸಣ್ಣಗೆ ನಡುಗಲಾರಂಭಿಸುತ್ತಿತ್ತು. ಅದು ಯಜಮಾನರ ರೇಗಾಟಕ್ಕೋ ಯಿಲ್ಲಾ ನಸುಕಿನ ಚಳಿಗೋ ಆ ಸಿವನೇ ಬಲ್ಲ! ಮಾದಯ್ಯನೋರ ಹೋರಿತನಕ್ಕೆ ಮೂಗುದಾರ ಆಕಲು ಅವುರವ್ವನಿಗಲ್ಲದೆ ಯಿನ್ನಾರಿಗೆ ಸಾಧ್ಯ? "ಸುಮ್ನ ಮನಿಕ್ಕಾ ಮಾದ. ಗಂಟ್ಳು ಅದೇಂತಾ ಹರ್ಕಂಬ್ಯಾಡಾ. ನಿನ್ ಸ್ವೊರುಕ್ಕೆ ಕೂಸು ಅಳ್ದೆ ಯೇನ್ ಮಾಡಾತು. ಮಕ್ಳು ಮರಿ ಯಿರಾ ಹಟ್ಟಿನಾಗೇ ಇವೆಲ್ಲ ಸಾಮಾನ್ಯ. ಸರೋಗಿಸಿಕ್ಕಂಡು ಹ್ವಾಗಬೇಕು" ಪಾತವ್ವನೋರು ಸೆಡ್ದು ವಡೆಯುತ್ತಿದ್ದರು.

"ನಿನ್ನಿಂದ್ಲೆ ಈ ಹಟ್ಟಿ ಯೆಕ್ಕುಟೋಯ್ತಾ ಇರಾದು. ಸ್ವಸೆಗೇ ಕುಮ್ಮಕ್ ಕ್ವಟ್ಟು ನನ್ನ ಮ್ಯಾಲೆ ಯೆತ್ತಿ ಕಟ್ಟಿಯ ಮಾಳಾದೋಳ್" ಬುಡಕ್ಕನೆ ಮಾದಯ್ಯನೋರು ಯೆದ್ದು ಕದ ತೆಗದು ಹಟ್ಟಿಯಿಂದ ಕಡದು ಹೋಗಿ ಬುಡುತ್ತಿದ್ದರು. ಮಾದೇವಮ್ನೋರು ದೀನರಾಗಿ ಅತ್ತೆಯ್ನೋರಾ ನೋಡುತ್ತಾ ಅಳುತ್ತಿದ್ದ ಕೂಸಿಗೆ ಹಾಲು ಕಚ್ಚಿಸಿ, ಸೆರಗ ವೊದ್ದಿಸುತ್ತಿದ್ದರು.

"ಇದ್ಯಾಕ್ ಹಿಂಗ್ ಪಿಳಿಪಿಳಿ ಕಣ್ಣು ಬುಡ್ತಾ ಕುಂತೆ ಮಾದೇವಿ. ಈ ಮಾದನ ಐಲುಪೈಲಾಟ ವಸ್ದಾ. ತಗಾತಗಾ ಕೂಸ್ಗಾ ಆಲು ಕೊಟ್ಟುಬುಟ್ಟು ನನ್ನ ಮಗ್ಗುಲಿಗೇ

ಕೊಟ್ಟು ನಿನ್ ವಗ್ತನ ಮಾಡೋಗು".

ಹೀಗೆ ಒಡತಿ ಮಾದೇವಮ್ಮೋರ ವಗ್ತನವೂ ತನ್ನೊಂದಿಗೆಯೇ ಆರಂಭವಾಗುತ್ತಿತ್ತು. "ಎಮ್ಮೆ ಹಸುಗೋಳ್ನೆಲ್ಲಾ ಆಚೆಗ್ ಕಟ್ಟುಬುಟ್ಟು ಕೊಟ್ಗಾ ತೊಳದು ಆಲ್ ಕರ್ಕೊಟ್‌ಬುಡು ಮಲ್ಲ. ಯಿನ್ನು ಅವುರು ಬರಾ ವತ್ಗೆ ಟೀ ಕಾಯ್ಸಿ ಬುಡಬೇಕು. ಚಳಿ ಅದೆ ನಿಂಗೂ ಕೊಟ್ಟಾನಂತೆ" ಮಾದಯ್ಯೋರ ನಡೆನುಡಿಗಳಿಗೆ ವಿರುದ್ಧವಾದ ರೀತಿನಾಗೆ ಬಲು ಮೆಲುದನಿಯಾಗೆ ಮಾದೇವಮ್ಮೋರು ಮಲ್ಲನಿಗೆ ಯೇಳುತ್ತಿದ್ದರು. ಮಲ್ಲ ಅವ್ವಾರು ಯೇಳುವ ಯೆಲ್ಲ ಕೆಲಸವ ತಲೆಯಲ್ಲಾಂತು ಮಾಡುತ್ತಿದ್ದ.

ಆದರೆ ಇಂದ್ಯಾಕೋ ಬೆಳಕರಿದು ಎಳಬಿಸಿಲು ಭೂಮಿಯ ಮ್ಯಾಲೆ ಆಟವಾಡ ತೊಡಗಿದ್ದರೂ ಯಾವ ದನಿಗಳೂ ಹಟ್ಟಿನಾಗೆ ಮೂಡಿರನಿಲ್ಲ. ಕರಿಮಂಚದತ್ತ ನೋಡಿದ್ದ ಮಲ್ಲ. ಕರಿಕಂಬಳಿಯ ಗುಬರು ಆಕಿಕೊಂಡ ಅಯ್ನೋರು ಕಪ್ಪುದೊಂದು ಗುಡ್ಡದಂಗೆ ಪವಡಿಸಿಯೇ ಯಿದ್ದಾರೆ. ಮಲ್ಲನ ನೋಟ ಕೆಳಗೆ ಹರಿದಿತ್ತು. ಪಾತವ್ವೋರು ಯೆಡಬಲದಾಗೆ ಹಿರಿಯೆಣ್ಣು ಮತ್ತು ಕಿರಿಕೂಸುಗಳ ಮನಗಿಸಿಕೊಂಡು ಮನಗಿದ್ದಾರೆ. 'ವೋ ಅವ್ವಾರು ಆಗ್ಲೆ ಯೆದ್ ಬುಟ್ಟೋರೆ' ಮಲ್ಲ ಅಂದುಕೊಳ್ಳುತ್ತಾ ಜಿಬರೆಗಣ್ಣುಗಳ ವರೆಸಿಕೊಳ್ಳುತ್ತಾ ಹಟ್ಟಿಯ ತಲೆಬಾಗಿಲತ್ತ ನಡದು ಅಗುಳಿಗೆ ಕೈ ಹಾಕಹೋದರೆ ಹಟ್ಟಿಯ ಕದ ಅರುಗಾಗಿದೆ. "ವೋ ಅವ್ವಾರು ಹಿತ್ಲಿಗೋಗಿರಬೇಕು" ಅಂದುಕೊಂಡ ಮಲ್ಲ ಕದವ ಮುಂದಕ್ಕೆ ಯೆಳಕಂಡು ಕೆರೆ ಕಡೆ ಹೊಂಟಿದ್ದ.

ಬೆಳುಗಿನ ತನ್ನ ಕಾರ್ಯಗಳನ್ನೆಲ್ಲಾ ಮುಗುಸಿಕ್ಕಂಡು ಮತ್ತೆ ಹಟ್ಟಿಗೆ ಮರಳುವವೊತ್ತಿಗೆ ಹಟ್ಟಿಯಲ್ಲಿ ಗೌಜು ಗದ್ದಲಗಳು ಅಡಿ ವೂರಿದ್ದವು. ಅಯ್ಯೋರಾ ಅಣ್ಣ ತಮ್ಮಂದಿರು, ಅವುರ ಹೆಂಡರು, ಮಕ್ಕಳು, ಅಕ್ಕಪಕ್ಕದ ಹಟ್ಟಿಯೋರು!

"ನಿಮ್ಮವ್ವೋರು ಯೆಲ್ಲಾ ಮಲ್ಲ" ಮಾದಪ್ಪೋರ ಗಡಸು ದನಿ ಮಲ್ಲನನ್ನ ಬೆಚ್ಚಿ ಬೀಳಿಸಿತ್ತು. ಅಯ್ಯೋರು ಯೇನು ಯೇಳುತ್ತಿದ್ದಾರೆಂಬುದು ಅವುನ ಮನಕ್ಕೆ ಅಷ್ಟು ಸುಲಭವಾಗಿ ಅರ್ಥವಾಗುವಂತಿರಲಿಲ್ಲ. "ಯಾನಳಿ ಅಯ್ಯೋರಾ...." ಬೆಬ್ಬೆಗೆರೆಯುತ್ತಾ ಕೇಳಿದ್ದ. "ಕೆಪ್ಪೇನ್ಲಾ ನಿಂಗೆ, ವತ್ತಾರೆಯಿಂದ ಮಾದೇವಿ ಕಾಣ್ತಿಲ್ಲಾ. ನಿಂಗೇನಾರಾ ಗೊತ್ತಿದ್ದದ ಅಂತ ಕ್ಯಾಳ್ತಾ ಅವ್ನಿ"

"ನಾ ಯಾಳಕ್ ಮುಂಚೆನೇ ಯೆದ್ದುಬುಟ್ಟಿದ್ರು ಅಯ್ನೋರಾ. ಹಟ್ಟಿ ಬಾಗ್ಲು ಅರ್ಗಾಗಿತ್ತು. ಹಿತ್ಲುಗೆ ಹ್ವಾಗಿರಬೇಕು ಅನ್ಕಂಡು ನಾ ಕೆರೆ ತಾವ್ಕೆ ಹ್ವಾಗಿದ್ದಿ. ಅವ್ವೋರಾ ನಾ ನೋಡನಿಲ್ಲಳಿ." ಮಲ್ಲ ಕಣ್ಣುಗಳಾಗೆ ನೀರಾಡಿಸುತ್ತಾ ದೀನನಾಗಿ ನುಡಿದಿದ್ದ.

"ಈ ಹಟ್ಟಿನಾಗೆ ಯಾಳಾರು ಕೇಳಾರು ಯಾರು ಇಲ್ಲ. ಅವುರವ್ರಿಗೆ ಅವುರವ್ರೇ ಮಾರಾಜ್ರು. ಮಾರಾಣೇರು. ಇವ್ಳು ಅವುಳಲ್ಲ ಇವ್ಳು ಅವುಳ್ಗೇ ಕುಮ್ಮಕ್ ಕೊಡ್ತಳೆ.

ನನ್ನ ಮ್ಯಾಲೇ ಎತ್‌ಕಟ್ತಾಳೆ. ಅದ್ಕೆ ಅವ್ಳು ಯೆಚ್ಕಂಡಿರದು. ಅವ್ಳು ಈವೊತ್ ಬರ್ಲಿ ಹಟ್ಟಿಗಾ. ವುಟ್ಸ್‌ನಿಲ್ಲ ಅನ್ನುಸ್‌ಬುಡ್ತನಿ. ಮಾದಯ್ಯ ಅಂದ್ರೆ ಯೇನೂಂತ ತೋರುಸ್‌ಬುಡ್ತಿನಿ" ಮಾದಯ್ಯನೋರು ತಮ್ಮನ್ನು ಹೆತ್ತವರಾದ ಪಾತವ್ವನೋರ ಮೋರೆಯನ್ನಷ್ಟು ತಿವುದು ಯೀರಭದ್ರುನ ಅವುತಾರುವ ತಾಳಿ ಧಗಧಗ ವುರಿಯತೊಡಗಿದ್ದರು. ಅವುರ ಹಾರಾಟಕ್ಕೆ ಐದರ ಹಿರೀಹೆಣ್ಣು ದೊಡ್ಡತಾಯಿಯು ಪಕ್ಕದಲ್ಲಿಟ್ಟುಕೊಂಡು, ಹನ್ನೊಂದು ತಿಂಗಳ ಕೈಗೂಸ ಮಡಿಲಿನಾಗೆ ಆಕಿಕೊಂಡು ಕುಂತಿದ್ದ ಪಾತವ್ವನಿಗೀಗ ಮೈಯ ಸಕ್ತಿಯೆಲ್ಲಾ ಸೋರಿ ಹೋದ ಅನುಭವವಾಗ ತೊಡಗಿತ್ತು. ಮಗನ ಹಾರಾಟಕ್ಕೆ ಬೆಚ್ಚಿ ಯೆಚ್ಚೆತ್ತ ಕೂಸು ಕಿಟಾರನೆ ಕಿರುಚಿ ಅಳತೊಡಗಿದ್ದರ ಪರಿವೆಯೂ ಇಲ್ಲದಂಗೆ ದೆಯ್ಯ ಮೆಟ್ಟುಕೊಂಡವರಂತೆ ಕುಂತು ಬುಟ್ಟಿದ್ದರು. "ಕೂಸ್ನ ಇತ್ತ ಕ್ವಡಿ ಅತ್ತಯ್ಯ ಅಳ್ತಾ ಅದೆ. ವಟ್ಟೆ ಹಸೀತಿದ್ದದೋ ಯೇನೊ?" ಕಿರಿಮಗನ ಸೊಸೆ ಬಸಮ್ಮ ಕೂಸ ತಗದುಕೊಂಡಿದ್ದೂ ಅವುರ ಅರಿವಿಗೆ ತಾಗಿದಂತೆ ಕಾಣನಿಲ್ಲ. ಬಸಮ್ಮ ಕೂಸ ಯೆಗಲಮ್ಯಾಲೆ ಆಕಿಕ್ಕಂಡು ಹಟ್ಟಿಯ ಸುತ್ತುತ್ತಾ ತಟ್ಟತೊಡಗಿದ್ದಳು. ಕೂಸು ಮನಗಿಕಂಡಿತ್ತು.

ಇಡೀ ಹಟ್ಟಿಯನ್ನ ಅದೊಂದು ಬಗೆಯ ರುದ್ರಮೌನ ಬಂದು ಅಮರಿಕಂಡ ಹಾಗಿತ್ತು. ಸೂರ್ಯದೇವ ಮೇಲೇರಲು ಆರಂಭಿಸಿದ್ದ. ಹಿತ ಕೊಡುತ್ತಿದ್ದ ಎಳಬಿಸಿಲು ಮಾಯವಾಗಿ ಉರಿಬಿಸಿಲು ಕಣ್ಣು ಕುಕ್ಕತೊಡಗಿತ್ತು. ಮಾದೇವಮ್ಮೋರ ಸುಳಿವು ಸಿಕ್ಕಿರಲಿಲ್ಲ. ಆ ಹಟ್ಟಿ ಈ ಹಟ್ಟಿ ಗೊತ್ತಿದ್ದ ಹಟ್ಟಿಗಳನ್ನೆಲ್ಲಾ ಆಳುಗಳ ಅಟ್ಟಿ ತಡಕಿಸಲಾಗಿತ್ತು. ವಂದೇ ವೂರಾಗಿದ್ದ ಅವರ ತವುರಿನವರೂ ಎದೆ ಎದೆ ಬಡಕೊಳ್ಳುತ್ತಾ ಓಡಿ ಬಂದಿದ್ದರು.

"ಅಪ್ಪಜ್ಜೋ, ಅವ್ವಣ್ಣಿ ಯೆಲ್ಲ" ಅಲ್ಲೀಗಂಟಾ ನಿದ್ದೆಗಣ್ಣಲ್ಲಿ ಅಜ್ಜಿ ಕೂಡೆ ಕುಂತಿದ್ದ ದೊಡ್ಡತಾಯಿ ಮಾದಯ್ಯೋರಾ ಪಂಚೆಯ ಯೆಳೆಯುತ್ತಾ ರಾಗ ತೆಗೆದಿದ್ದಳು.

"ಹ್ವಾಗ ಮಾಳಾದ್ದೇ" ಮಾದಯ್ಯೋರು ಮಗಳ ಮ್ಯಾಲೆ ಕೈಯೆತ್ತಿದ್ದರು. "ಅದುಕ್ ಯಾನ್ ಗೊತ್ತಾದದು ಬುಡು ಮಾದ." ಹಿರಿಯಣ್ಣ ನಂಜಯ್ಯ ದೊಡ್ಡತಾಯಿಯ ಸೆಳಕಂಡು ಅವ್ವನತ್ತ ಕಳುಸಿ "ರಾತ್ರಿಯೇನಾರಾ ಜಗ್ಳ ಗಿಗ್ಳ ಆಗಿ ಮಾತುಕತೆ ನಡೀತಾ ಮಾದ" ಸಣ್ಣಗಿನ ಧ್ವನಿಯಲ್ಲಿ ತಮ್ಮನನ್ನು ಕೇಳಿದ್ದರು. ಮಾದಯ್ಯನೋರು ಅಣ್ಣಯ್ಯನೋರಾ ಕಡೆ ತಮ್ಮ ಉರಿನೋಟವನ್ನಷ್ಟೇ ಬುಟ್ಟವರಾಗಿದ್ದರು.

ನಂಜಯ್ಯನೋರಿಗೇನು ವೂರಿಗೇ ಗೊತ್ತಿರುವಂಥದ್ದು ಮಾದಯ್ಯನೋರಾ ಈರಭದ್ರತನ. ಆ ಈರಭದ್ರತನದ ಯಿಂದೆ ಅವುರ ಬದುಕ ಕಾಣಿಕೆಯೂ ಸಾಕಷ್ಟೇ ಇತ್ತು.

****

ಪಾರೋತಮ್ಮನ ಯಜಮಾನರು ಸಿವಸಿವಾ ಅಂದಾಗ ಅವುರ ಮಡಿಲಿನಾಗೆ ಮೂರು ಜನ ಗಂಡೈಕಳುಗಳು ಇದ್ದವು. ಹಿರಿಯವ ನಂಜಯ್ಯ, ಕಿರಿಯವ ಈರಯ್ಯ, ನಡುಕಲವ ಮಾದಯ್ಯ. ಗಂಡು ದಿಕ್ಕಿಲ್ಲದಂತಾದ ಪಾರೋತಮ್ಮನ ಹಟ್ಟಿ ನಿಲ್ಲುವಂತಾಗಲು ಹಿರಿಯೋನಿಗಿಂತ, ಕಿರಿಯೋನಿಗಿಂತ ನಡುಕಲವನ ಛಾತಿಯೇ ಮುಖ್ಯವಾಗಿತ್ತೆಂಬುದು ಯೆಲ್ಲರಿಗೂ ಗೊತ್ತಿದ್ದ ವಿಷಯವೇ. ನಂಜಯ್ಯ ತಾನಾಯಿತು ತನ್ನ ಪಾಡಾಯಿತು ಯೆಂಬಂತಿದ್ದರೆ, ಈರಯ್ಯ ತನ್ನ ಪಾಡನ್ನೂ ಅಣ್ಣನ ಮ್ಯಾಲೆ ಆಕಿ ಕುಂತುಬಿಟ್ಟಂಥ ಸರದಾರ. ಹಟ್ಟಿಯಾಗೆ ಯೆಲ್ಲ ಜವಾಬುದಾರಿಗಳ ಹೊರುವ ಮಾದಯ್ಯ ವರುಷಗಳು ಕಳೆದಂತೆ ಹಟ್ಟಿಯ ಯಜಮಾನನಾಗಿಬಿಟ್ಟಿದ್ದ. ಪಾತವ್ವ ನಿಟ್ಟುಸಿರುಬುಟ್ಟಿದ್ದಳು. 'ತನ್ನ ಹಟ್ಟಿಯ ನಡೆಸುವ ಸರದಾರ ಈ ಮಾದ' ಎಂಬ ಯೆಮ್ಮೆ, ಅಭಿಮಾನಗಳ ತಾಳಿದ್ದಳು.

ವರುಷಗಳು ವುರುಳಿದ್ದವು. ಯೆಲ್ಲರಿಗೂ ಲಗ್ನವಾಗಿತ್ತು. ಅವುರವುರದೇ ಹಟ್ಟಿ, ಗದ್ದೆ, ವಲಗಳು ಆಗಿದ್ದವು. ಪಾತವ್ವನ ಹೈಕಳು ಅಪ್ಪನನ್ನು ಕಳಕೊಂಡರೂ ಅಡಾವುಡಿಯಾಗಿ ಬೆಳೆಯನಿಲ್ಲ. ಅಪ್ಪಂತವರು ಅನ್ನಿಸಿಕೊಂಡರು. ಆ ಯೆಲ್ಲ ಮಾತುಗಳ ಹಿಂದೆ ಮಾದಯ್ಯನೋರಿದ್ದರು. ತೋರದೇಹವನ್ನಿಟ್ಟುಕೊಂಡು ಕನ್ನಡಕವನ್ನೇರಿಸಿ ಎಳದು ಎಳದು ಮಾತಾಡುವ ನಿಧಾನಸ್ಥ ನಂಜಯ್ಯನವರಿಗಾಗಲಿ, ಕಡ್ಡಿಕಾಲುಗಳ ಆರಡಿಯ ತಂಕ ಬುಟ್ಟುಕೊಂಡು ಹಲ್ಲು ಕಚ್ಚಿಕೊಂಡೇ ಮಾತಾಡುವ ಈರಯ್ಯನವರಿಗಾಗಲಿ ಅಣ್ಣ ತಮ್ಮ ಯೆಂಬ ವ್ಯತ್ಯಾಸವೇ ಯಿಲ್ಲದೆ ಮಾದಯ್ಯನೋರು ಯಿರೀಕರ ಸ್ಥಾನವ ಅಲಂಕರಿಸಿದ್ದರು. ಕೆಂಪುಕಣ್ಣುಗಳ ಕೆಳಗೆ ದಪ್ಪಮೂಗು, ದಪ್ಪಮೂಗಿನ ಕೆಳಗೆ ಹತ್ತಾರು ಕಂಬಳಿವುಳಗಳ ವಸೆದು ಮಾಡಿದಂಥ ಮೀಸೆ, ಪ್ರಮಾಣಬದ್ಧ ದೇಹ, 'ಮಾಳಾದ್ದೆ' ಎಂದಲ್ಲದೆ ಮುಗಿಯದ ಮಾತುಕತೆ - ಹಟ್ಟಿಯೋರಿರಲಿ ವೂರೋರೂ ಮಾದಯ್ಯನೋರಾ ಯೇಳಿಕೇಳಿ ವಗ್ತನ, ಬಾಳಾಟ ನಡಸುವಷ್ಟು ಘನತೆವಂದಿದವರಾಗಿಯೇ ಮಾದಯ್ಯ ಬೆಳೆದಿದ್ದರು. ರಕ್ತದೊಂದಿಗೆಯೇ ಬಂದ ಈರಭದ್ರತನ, ವಯ್ಸಿಗೆ ಮುಂಚೆಯೇ ಬಂದು ಅಮರಿಕೊಂಡ ಹಿರೀಕತನ, ತಾನೊಬ್ಬನೇ ಸರಿಯೆಂಬ ಹಠ, ಯಾವ ಕೆಲಸ ಕಾರ್ಯವಾದರೂ ಸೈ ಸಾಧಿಸಿಯೇ ತೀರುವೆನೆಂಬ ಛಾತಿ, ವೂರೋರಿಗೆ ಕೈಲಾದಂಗೆ ಸಹಾಯ ಮಾಡುವ ವುಪಕಾರ ಗುಣ - ಈ ಯೆಲ್ಲದರಿಂದ ಹುಟ್ಟಿಕೊಂಡ ವೂರೋರ ಹೊಗಳಿಕೆ ಮಾತು - ಮಾದಯ್ಯನೋರನ್ನು, ಎದುರು ನಿಂತವನ ಮಾತುಗಳ ವುಚಾಯಿಸಿ ನೋಡುವ ಅಹಂಕಾರಿಯನ್ನಾಗಿ ಮಾಡಿದ್ದೇನೂ ದೊಡ್ಡದಲ್ಲ. ಬ್ಯಾರೆಯೋರ ಮಾತ ಕಿವಿಗೆ ಆಕಿಕೊಳ್ಳದ, ಸಟಕ್ಕನೆ, ಕ್ಯಾಣ ಮಾಡಿಕೊಂಡು ಎದುರಿದ್ದೋರ ಮ್ಯಾಲೆ ಬೀಳುವ, ಕ್ವಾಪದಿಂದ ಹಲ್ಲು ಕಚ್ಚಿ ಮಾತುಗಳ ಚಚ್ಚಾಕುವ

ಮಾದಯ್ಯನೋರು ಯೆಂದರೆ ಈರಭದ್ರನೇ ಯೆಂಬ ನಿಲುವು ಎಲ್ಲರದೂ ಆಗಿತ್ತು. ಅದೂ ವಂದು ಗೌರುವವೇ!

ವೂರಿನಾಗೆ ಯಾವುದೇ ನ್ಯಾಯವಾಗಲಿ, ಧರ್ಮವಾಗಲಿ, ನೀತಿಯಾಗಲಿ ನಡೆಯಬೇಕೆಂದರೆ ಅಲ್ಲಿಗೆ ಮಾದಯ್ಯನೋರಿಗೆ ಕರೆ ಹೋಗಲೇಬೇಕಿತ್ತು. ಈ ನಡುವೆ ವೂರೋಟಿ ಜನುಗಳಿಗೆ ಅನುಕೂಲವಾಗಲೆಂದು ಕೆರೆಯಂಥ ಬಾವಿಯ ತೋಡಿಸಿ ಪ್ರತಿಯೊಬ್ಬರೂ ತಮ್ಮಟ್ಟಿಯ ಬ್ಯಾಳೆಕಾಳು ಬೇಯಿಸಲು ಅನುಕೂಲ ಮಾಡಿಕೊಟ್ಟಿರಲಾಗಿ ಬೇರೆ, ಅವುರ ಯೆಸರ ಹಿಂದೆ ವೂರೋರ ಕೃತಜ್ಞತೆಯ ಸ್ವರೂಪವಾಗಿ ಬಾವಿಕೆರೆ ಎಂಬೊಂದು ವಿಶೇಷಣವೂ ಸೇರಿಕ್ಕಂಡು ಬಾವಿಕೆರೆ ಮಾದಯ್ಯನೋರು ಎಂಬುದು ದಿವೀನಾದ ಯೆಸರಾಗಿ ಯೆಲ್ಲರ ಬಾಯಿಗಳಲ್ಲಿ ಕುಣಿಯುತ್ತಿತ್ತು.

ಈ ಇಂಥ ಮಾದಯ್ಯನೋರು ಹಟ್ಟಿಯಾಗೆ ಇದ್ದಂಥ ಸಮಯ ಮಾದೇವಮ್ಮೋರಿಗೆ ವುಸಿರುಗಟ್ಟಿಸುವ ಗಾಬರಿಯ ಕಾಲ. ಸೊಸೆಯ ನಡುಕ, ಗಾಬರಿಗಳ ಆದಷ್ಟೂ ಕಳೆಯುವ ಜವಾಬ್ದಾರಿಯ ಪಾರೋತಮ್ಮೋರು ತಾವಾಗಿಯೇ ವಹಿಸಿಕ್ಕಂಡಿದ್ದರು. ಮಾದಯ್ಯನೋರಿಗೆ ಹೆಣ್ಣು ನೋಡುವ ಜವಾಬ್ದಾರಿ ಎದುರು ನಿಂತಾಗ ಅವುರು ಹತ್ತಾರು ಬಾರಿ ಯೋಚಿಸಿದ್ದರು. ಅಲ್ಲಿಯಗಂಟಾ ದಿವೀನಾಗಿಯೇ ಯೆಮ್ಮೆ ಪಟ್ಟುಕೊಳ್ಳುವಂತೆ ಕಾಣುತ್ತಿದ್ದ ಮಗರಾಯನ ಗುಣಗಳು ಇದ್ದಕ್ಕಿದ್ದಂತೆಯೇ ಗಾಬರಿ ಮೂಡಿಸುವ ಅವಗುಣಗಳಾಗಿ ಕಣ್ಣೆದುರು ತಕಥೈ ಕುಣಿದಾಡಿದ್ದವು. ಯಾವ ಯೆಣ್ಣು ತಾನೆ ಇವುನ ಜ್ವತೆ ಮೂರೂ ಮುಕ್ಕಾಲು ಗಳಿಗೆ ನೀಸಾಳು?" ಮಗನಾದರೂ ಪಾರೋತಮ್ಮರು ದಿಟವಾಗಿಯೇ ಆಲೋಚಿಸಿಕ್ಕಂಡಿದ್ದರು. ಲಗ್ನ ಅಂದ್ರೇನು ಕೈಗೆ ಬಳೆ ತೊಟ್ಟುಕೊಂಡು ತೆಗೆದು ಇಟ್ಟಂಗೆಯೆ!? ಸಾಯಾಗಂಟಾ ವಂದೇ ಸೂರಿನಡೀ ಬಾಳಾಟ ನಡೆಸಬೇಕು. ತಾವೇನೋ ಮಗುನೊಂದಿಗೆ ಮಗನಷ್ಟೇ ಮೊಂಡಾಟ ಆಡಿಕ್ಕಂಡು ಬಾಳ ಸಾಗಿಸಿದ್ದಾಯ್ತು. ಯಿನ್ನು ಮುಂದೆ ಇರಾದು ಮಾರೀಹಬ್ಬ! ಮಾದಯ್ಯೋರ ಯೆಲ್ಲ ವರಟುಗುಣಗಳ ಸಯಿಸಿಕೊಳ್ಳುವ, ಇಲ್ಲ ಅವುರಷ್ಟೇ ಒರಟಾದ ಯೆಣ್ಣ ತಮ್ಮಟ್ಟಿಗೆ ಕಿರುಸ್ವಸೆಯಾಗಿ ತರಬೇಕೆಂಬ ಯಿರಾದೆ ಅವುರಿಗಿತ್ತು. ಆದರೆ ಯೆಣ್ಣು, ವೊನ್ನು, ಮಣ್ಣು - ಋಣಕ್ಕೆ ವಂದಿಕೊಂಡ ಮಾತುಗಳು! ಯೆಲ್ಲೆಲ್ಲೋ ವುಡುಕಾಡಿ, ತಡುಕಾಡಿ ಕುಂತವರಿಗೆ ತಮ್ಮೂರಾಗೇ ಯಿದ್ದ ಮಾದೇವಿಯೇ ಸ್ವಸೆಯಾಗಿ ಬರುತ್ತಾಳೆಂಬ ಕನಸೂ ಅವುರಲ್ಲಿ ಮೂಡಿರನಿಲ್ಲ. ಬಾವಿ ತಾವೋ, ಗುಡಿ ತಾವೋ, ವೂರೋಟಿ ಜಾತ್ರೆ ತಾವೋ ಕಂಡಾಗ ಬೆಳ್ಳಗೆ ವಳೆಯುತ್ತಾ ಎಳೆ ಸಸಿಯಂತೆ ಕಂಗೊಳಿಸುತ್ತಿದ್ದ ಹತ್ತು ಹನ್ನೆರಡರ ಬಾಲೆಯ ಕುರಿತಂತೆ ಅದೊಂದು ಅಭಿಮಾನ ಮೂಡುತ್ತಿತ್ತು. ಆದರೆಂದೂ ಆ ಹೆಣ್ಣು ತನ್ನಟ್ಟಿಯ ಸ್ವಸೆಯಾಗಿ ಬರಬೇಕೆಂಬ ಆಸೆ ಇಂಕರವೂ ಇಣುಕಿರಲಿಲ್ಲ. ಆದರೆ ಯಾಕೋ ಯೇನೋ

ಮಾದಯ್ಯೋರಾ ಋಣಾನುಬಂಧಕ್ಕೆ ಆ ಯೆಣ್ಣು ಬಾಳ್ವೆಯೇ ಅಂಟಿಕ್ಕಂಡಿತ್ತು.

ಮಾದೇವಮ್ಮೋರ ಗುಣ ಮಾದಯ್ಯನೋರ ಗುಣಕ್ಕೆ ತದ್ವಿರುದ್ಧವಾಗಿತ್ತು. ದ್ಯಾವರು ಯಾಕಾರೂ ಇಂಥ ಯಡವಟ್ಟು ರೀತಿಯಲ್ಲಿ ಸಂಬಂಧಗಳ ಕೂಡಿಸುತ್ತಾನೋ? ಪಾರೋತಮ್ಮನೇ ಬಹಳ ಯಥೆ ಪಟ್ಟುಕೊಂಡಿದ್ದರು. ಲಗ್ನವಾದಮ್ಯಾಗೂ ಮಾದಯ್ಯನೋರಾ ಸೊಭಾವವೇನೂ ಬದಲಾಗನಿಲ್ಲ. ಉಟ್ಟಿದ್ ಸುಳಿ ಬೋಳ್ಸುದ್ರೆ ಹೋದಾತಾ' ಯೆಂಬಂಗೆ ಸಾಸ್ವತವಾಗೇ ಮುಂದುವರಿದುಕೊಂಡು ಬಂತು. ಹಾರಾಟ, ಕೂಗಾಟ, ಅದರಾಟಗಳಿಗೆ ಮಾದೇವಮ್ಮೋರು ಗಡಗಡ ನಡುಗಿ ಮೊದಲೇ ಬೆಳ್ಳಗಿದ್ದವರು ಹತ್ತಿಯಂಗಾಗಿಬುಡುತ್ತಿದ್ದರು. "ತಳಾರ ತಳಾರ ಮಾದ. ಆ ಯೆಣ್ಣು ಯೇನಂದ್‌ಕಂಡಿದ್ದಯಿಃ ನಿನ್ ಹೆಡ್ತಿ ಕಣ್‌ಲಾ. ಯಿಟ್ಟು ಬೂದಿ ಯೆಲ್ಲಾನೂ ವಂದೇ ಅನ್ನಂಗೆ ಆಡ್‌ಬ್ಯಾಡಾ. ನೀ ವರಗಡೆ ಯೆಂಗಾರಾ ಯಿರು. ಯೆಡ್ತಿ ವಂದ್ಗೆ ವಸಿ ಸಾಂತಿ, ಪ್ರೀತಿಯಿಂದ ಇರುಡಾ... ಯೆತ್ತಿಗೋ, ಆಳ್‌ಮಗಂಗೋ ಗದರದ್‌ಹಾಂಗೆ ಅವುಳ್ನು ಗದರ್ತಾ ಕುಂತ್ಕತೀಯಲ್ಲ. ಕಂಡೋರ ಹಟ್ಟಿ ಮಗ್ಳು ಕಣ್ಣೀರ ಹಾಕುಸ್‌ಬ್ಯಾಡ ಮಾದ" ಬಹಳವೇ ಅಲವತ್ತುಕ್ಕಂಡು ಪಾರೋತಮ್ಮೋರು ಮಗನಿಗೆ ಬುದ್ಧಿ ಯೇಳಿ ಯೇಳಿ ಸಾಕಾದರು. ಮಾದಯ್ಯನೋರು ನಾಯಿಬಾಲ ದಬ್ಬೆ ಕಟ್ಟಿದರೂ ನೆಟ್ಟಗಾಗನಿಲ್ಲ ಯೆಂಬಂಥ ಸ್ಥಿತೀನಾಗೇ ವುಳಕಂಡರು. "ನಿನ್ ಸ್ವಸೆಗೆ ಮೊದ್ಲು ವಗ್ತನ ಕಲ್ಸು. ಅವುಳನ್ನೇ ವಹಿಸಿಕ್ಕಂಡು ನಂಗ ಬುದ್ಧಿ ಯೇಳಾಕೆ ಬರಬ್ಯಾಡಾ" ಅವ್ವನ ಮೂತಿ ತಿವಿಯುತ್ತಾ ನುಡಿಯುತ್ತಿದ್ದರು.

ಲಗ್ನವಾದ ವಂದೆರಡು ವರ್ಷಗಳಲ್ಲಿಯೇ ಮಾದೇವಮ್ಮೋರು ಬಸಿರಾಗಿದ್ದರು. 'ಕೂಸ ವೊಕಾ ಕಂಡ ಮ್ಯಾಲಾದರೂ ಮಗುನ ಸೋಭಾವ ಸರಿಯಾದೀತಾ ಕಾಣೆ'ಯೆಂಬೊಂದು ಆಸೆ ಪಾರೋತಮ್ಮೋರಲ್ಲಿ ಯಿದ್ದಕ್ಕಿದ್ದಂತೆ ಕಾಣಿಸಿಕಂಡಿತ್ತು. ವಟ್ಟೆ ಯೆತ್ತಿಕೊಂಡು ಸುಸ್ತು ಸಂಕಟ ಅನುಭೋವಿಸುತ್ತಾ ಓಡಾಡುವ ಯೆಂಡರ ಮ್ಯಾಲಿನ ಮಾದಯ್ಯನೋರಾ ದಿಟ್ಟಿ ಯೇನೇನೂ ಬದಲಾಗನೇ ಇಲ್ಲ. ಪಾರೋತಮ್ಮೋರು ದುಪ್ಪಟ್ಟು ಪ್ರೀತಿಯ ತೋರಿಸಿಕೊಂಡು ಸೊಸೆಯ ಸಲಹತೊಡಗಿದ್ದರು. ಸೊಸೆಗೆ ಯೇಳು ತುಂಬಿದ ಕೂಡಲೇ ತವ್ಮೊಟ್ಟಿಗೆ ಮನಗಿಸಿಕೊಳ್ಳಲು ತೊಡಗಿದ್ದರು. ಮಾದಯ್ಯನೋರಾ ಕುಣಿದಾಟ ಮತ್ತಷ್ಟು ಜೋರಾಯಿತು. ಸೊಸೆ ನೆಮ್ಮದಿ ಕಂಡಳು.

ಊರದೇವಿ ದೊಡ್ಡತಾಯಿಯ ಜಾತ್ರೆ ಬರಲಾಗಿ ಸದ್ಯ ಮಾದಯ್ಯನೋರಾ ಗಮುನವೆಲ್ಲಾ ಆ ಕಡೆ ತಿರುಗಿಕಂಡಿತು. ಗುಡಿಯ ಸುಣ್ಣ, ಬಣ್ಣ, ಕೆಮ್ಮಣ್ಣು, ಅಯ್ಯನೋರ ಜತೆಗಿನ ಮಾತುಕತೆ, ಬಂಡಿಯೆಳೆಯುವ ಸ್ಪರ್ಧೆ, ನಾಟಕ ತಯಾರಿ - ಹಿಂಗೆ ಹತ್ತಾರು ಕಡೆ ಅವುರ ಗಮುನವೆಲ್ಲಾ ಹರಿದು ಚೆಲ್ಲಾಪಿಲ್ಲಿಯಾಯಿತು. ಹಟ್ಟಿ

ಕಡೆಗಿನ ಗ್ಯಾನ ಪೂರಾ ನಿಂತೇವೋಯಿತು. ಹಟ್ಟಿಯಲ್ಲಿ ಅದಕ್ಕಾಗಿ ಯಾರೇನೂ ನೋವುಂಟು ಮಾಡಿಕೊಳ್ಳನಿಲ್ಲ. ನಿರಾಳದಿಂದ ವುಸಿರಾಡತೊಡಗಿದ್ದರು.

ಅಂದು ಜಾತ್ರೆಯ ದಿನ ವಬ್ಬಟ್ಟಿನ ವಾಸನೆ ಹಟ್ಟಿಯನ್ನೆಲ್ಲಾ ಹರಡಿಕೊಳ್ಳುತ್ತಿರುವಾಗಲೇ ವಬ್ಬಟ್ಟು ತಟ್ಟುತ್ತಿದ್ದ ಮಾದೇವಮ್ನೋರ ನಡ ಕಳಕೆಂದು "ಅತ್ತೋ ಕುಂತ್ಗಳಿಕ್ಕೆ ಆಯ್ತಿಲ್ಲ. ವಂಥರಾ ಆಯ್ತದೆ ನಡ ಕಳಕ್ ಅಂತಾ ಅದೆ. ಅವ್ವೋ...... ನಾ ತಡೀನಾರೆ....." ಮುಖವ ಕಿವುಚುತ್ತಾ ಅಡುಗೆ ಕ್ವಾಣೆಯಲ್ಲೇ ವುಂಟಿಕಂಡಿದ್ದರು.

ಹೆರಿಗೆ ನೋವು ಮಾದೇವಮ್ನೋರಿಗೆ ಕಾಣಿಸಿಕಂಡಿದೆ ಯೆಂದ ತಕ್ಷಣ ವಾರೆಗಿತ್ತಿಯರೆಲ್ಲಾ ದಾಡೌಯಿಸಿದ್ದರು. ಮೈಲಿಗೆಯಾದೀತೆಂದು ಅಡುಗೆಕ್ವಾಣೆಯಲ್ಲಿದ್ದ ಸಕಲವೂ ನಂಜಯ್ಯನೋರ ಹಟ್ಟಿಗೆ ಸಾಗಹಾಕಲ್ಪಟ್ಟಿತ್ತು. ನೋವು ಜಾಸ್ತಿ ಆದಂಗೆ ಪಾರೋತಮ್ನೋರೆ ಗಾಬರಿಯಾಗಿದ್ದರು.

"ಹಿಂಗ್ಯಾಕ್ ಹಿಂಗ್ ಗಾಬರಿ ಆದೀರಿ ಅತ್ತೆಯ್ಯ. ಚೊಚ್ಚಲು ಯೆರ್ಗೆ ಅಲ್ವಾ? ಕಾಡುಸ್ತದೆ. ತಳಾರಾಗಿ ಆಯ್ತದೆ." ಹಿರಿಸೊಸೆ ನಾಗಮ್ಮ ಸಮಾಧಾನ ಪಡಿಸಿದ್ದಳು. ಅಡುಗೆಕ್ವಾಣೆಯ ಬೆಂಕಿ ನಂದುಹೋಗಿ ಬಚ್ಚಲುಮನೆಯ ನೀರೊಲೆಯಲ್ಲಿ ಬೆಂಕಿ ಕಾಣಿಸಿಕೊಂಡು ಬಿಸಿನೀರು ಕೊತಕೊತನೆ ಕುದಿಯ ತೊಡಗಿತ್ತು. ತೊಳದಿಟ್ಟ ಕುಡುಗಲು, ಹರಳೆಣ್ಣೆ, ಹಳೇಸೀರೆ, ಮೊರ, ಹೊಟ್ಟು, ಬೂದಿ ಕ್ವಾಣೆಯ ಆಚೆ ಕಾದು ಕುಳಿತವು.

"ಮೈಸೂರು ಡಾಕುಟ್ರು ತಾವ್ಕೆ ಕರ್ಕ ವೋಗಬೇಕಾಯ್ತದ. ಕಾಣೆ" ವೊತ್ತು ಇಳಿಯ ತೊಡಗಿದಂತೆ ಗಾಬರಿಯಾದ ಪಾರೋತಮ್ಮ ನುಡಿದಿದ್ದರು.

"ಇದ್ಯಾಕ ಕಾಣೆ ಅತ್ತಯ್ಯಾ ಹಿಂಗಾಡಿರೋ. ಯಾರ್ಗೂ ಆಗ್ದೇರಾ ಯೆರ್ಗೆಯಾ ಆಗ್ತಾ ಯಿರಾದು. ವೂರಾಗೇ ನಾ ಮೂರ್ ಮಕ್ಕ ಹೆರನಿಲ್ಲವಾ" ನಾಗಮ್ಮ ಮನದಾಗೆ ಯೋಚಿಸುತ್ತಾ "ನೀವೂ ಸರೀ ಕ ತಗಳಿ ಅತ್ತಯ್ಯಾ. ನೀವು ವಸಿ ಪಡಸಾಲೆ ಮ್ಯಾಲೆ ಕುಂತು ಸಾಂತವಾಗಿರಿ. ನಾನೇ ನಿಮ್ಮ ಕರೀತೀನಿ. ಈಗ ಯೇನಾಯ್ತು ಅಂತ ಮೈಸೂರಾಸ್ಪತ್ರೆಗೆ ಹ್ಯಾಗಬೇಕು" ಹೊರಗೆ ಕಳಿಸಿಕೊಟ್ಟಿದ್ದಳು.

ಪಡಸಾಲೆಯಲ್ಲಿ ಪ್ರತಿಷ್ಠಾಪಿತರಾದ ಪಾರೋತಮ್ಮರಾ ಸುತ್ತ ನಾಕಾರು ಜನ ಬಂದು ನಿಂತರು. ಯಿಚಾರಣೆ ನಡೆಸಿದರು.

ಪಾರೋತಮ್ನೋರು ಮಲ್ಲನನ್ನು ಕರದು ಮಾದಯ್ಯನೋರನ್ನ ಕರೆ ತರಲು ಅಟ್ಟಿದ್ದರು. ಮಲ್ಲ ಬರಿಗೈನಾಗೆ ಬಂದಿದ್ದ. "ಜಾತ್ರ ಯವಸ್ಥೇಲಿ ಇವ್ನಿ. ಹೆಂಡ್ರುಗೆ ವಟ್ಟೆನೋವು ಬಂದ್ರೆ, ನಾ ಬಂದು ಯೇನ್ ಮಾಡಂಗೆ ಇವ್ನಿ. ಅವೆಲ್ಲಾ ಹೆಂಗುಸ್ರು ಕೆಲ್ಸ. ಮಾಡಿಕೊಳ್ಳಾಕೇಳು". ಮಾದಯ್ಯನೋರು ಹೇಳಿದ್ದ ಮಾತು ವಪ್ಪಿಸಿದ್ದ. ಅಷ್ಟರಲ್ಲಿ "ಅತ್ತಯ್ಯೋ ಒಳಗ್ಬನ್ನಿ ಒಳಗ್ಬನ್ನಿ" ಕಿರಿ ಸೊಸೆ ಬಸಮ್ಮರ ಧ್ವನಿ ಮೊಳಗಿತ್ತು.

ದೊಡ್ಡತಾಯಿಯ ಜಾತ್ರೆಯ ದಿನವೇ ಮಾದೇವಮ್ಮ ಮಾದಯ್ಯ ದಂಪತಿಗಳಿಗೆ ಮೊದಲ ಪುತ್ರೀ ಜನನವಾಗಿತ್ತು. ಹಟ್ಟಿ ತುಂಬಾ ಸಡಗರ ತುಂಬಿಕ್ಯಂಡಿತ್ತು. ಕುಡಗಲಿನಿಂದ ಕರುಳಬಳ್ಳಿ ಕತ್ತರಿಸಿದ್ದ ಕೂಸ ಮೊರದ ಮ್ಯಾಲೆ ಮಲಗಿಸಿ ಬೆಳಕಿಗೆ ಹಿಡಿದು ಪಾರೋತಮ್ಮ ಬುಟ್ಟ ಕಣ್ಣು ಬುಟ್ಟ ಹಂಗೇ ನೋಡಿದ್ದರು. ಅವ್ವನದೇ ರೂಪು, ಬಣ್ಣಗಳನಾಂತು, ವುಣ್ಣಿಮೆ ಚಂದ್ರ ಹೊಳೆದಂಗೆ ಕೂಸು ಕಂಡಿತ್ತು. ಮಲ್ಲ ಮಾಸಲು, ಕಸವನ್ನೆಲ್ಲಾ ವಟ್ಟು, ಬೂದಿಗಳ ಜ್ಜತೆ ಗೋರಾಡಿ ಹಿತ್ತಲಲ್ಲಿ ಹಳ್ಳ ತಗದು ಹೂತಾಕಿ ಬಂದಿದ್ದ.

ದೊಡ್ಡತಾಯಿಯ ದಯೆಯಿಂದ ಅವುಳ ಜಾತ್ರೆಯ ದಿನುವೇ ವುಟ್ಟಿದ ಕೂಸಿಗೆ ಮಠದ ಅಯ್ಯನೋರು ಹನ್ನೆರಡನೇ ದಿನಕ್ಕೆ ಬಂದು ಲಿಂಗಧಾರಣೆ ಮಾಡಿ ದೊಡ್ಡತಾಯಿ ಎಂದು ಹೆಸರಿಟ್ಟು ಹೋಗಿದ್ದರು. ಮೊದಲದಾದರೂ ಪಾರೋತಮ್ಮರು ಸೊಸೆಯನ್ನು ತವರಿಗೆ ಕಳಿಸದೆ ತಾವೇ ಆಸಕ್ತಿ ವಹಿಸಿ ಸೊಸೆಯ ಬಾಣಂತನ ಮಾಡಿದ್ದರು.

ದೊಡ್ಡತಾಯಿ ನಾಕೈದು ವರ್ಷಕ್ಕೆ ಬಂದಾಗಲೇ ಮಾದೇವಮ್ಮೋರು ಎರಡನೆ ಹೆರಿಗೆಗೆ ಸಿದ್ಧವಾಗಿದ್ದರು. ಯೆರಡನೇ ಕೂಸೂ ಯೆಣ್ಣಾಗಿತ್ತು.

ಈ ನಡುವೆ ನಂಜಯ್ಯನೋರು ಪಾರೋತಮ್ಮೋರಾ ಕಿವಿಗೆ ವಂದು ಸುದ್ದಿಯ ಬಹಳ ನಾಜೂಕಾಗಿ ಮುಟ್ಟಿಸಿದ್ದರು. "ಮಾದಯ್ಯನೋರಿಗೆ ವರಗಡೆ ಯೆಲ್ಲೋ ಸಂಬಂಧ ಇರಾ ಹಂಗದೆ" ಎಂಬುದೇ ಆ ಸುದ್ದಿ.

"ಅಲ್ಲ ಕ ನಂಜ ಹಟ್ಟಿಯಾಗೆ ಕೈ ತೊಳದು ಮುಟ್ಟ ಅಂತಾ ಹೆಂಡತೀನಾ ಇಟ್ಕಂಡು ಈ ಮಾದುಂಗೆ ಯಾಕ್ಬಂತು ಇಂಥಾ ಬುದ್ಧಿ ಅಂತೀನಿ" ಕಂಗಾಲಾಗಿ ಧ್ವನಿ ಇಳಿಸಿ ನುಡಿದಿದ್ದರು.

"ಸುದ್ದಿ ಈಗ್ಲೇ ನಿಜಾ ಅನ್ನಾಕ ಬ್ಯಾಡಕವ್ವೋ.... ಅವ್ರು ಇವ್ರು ಅಂದಿದ್ದ್ ಕ್ಯಾಳ್ಕಂಡು ನಿಂಗ ಯೇಳ್ತಾ ಇವ್ನಿ. ಯೆಷ್ಟ್ ನಿಜವೋ ಎಷ್ಟು ಸುಳ್ಳೋ ನಂಗೊತ್ತಿಲ್ಲ. ಕಿವಿಗ್ಹಾಕಿ ಕಂಡಿರು. ಅವುನ್ನಾ ಸೊಲ್ಪ ಯೆಚ್ಚರ್ಕೆಯಿಂದ ಗಮುನ್ಸು. ಗಂಡಸ್ರೀಗೇನಾ ಗೂಳಿಗಳಂಗೆ. ಹಸ್ರು ಕಂಡಕಡೆ ಮೇಯ್ಯಕಥ ಬಂದು ಬುಡ್ತವೆ. ಹಟ್ಟಿ ಮೇವಾದ್ರೇನಾ, ಊರೋಟಿ ಮೇವಾದ್ರೇನಾ. ವಟ್ಟೆ ತುಂಬಾದು ಮುಖ್ಯ ಅನ್ಕಂಡು ಬುಡ್ತವೆ". ನಂಜಯ್ಯನೋರು ಅವ್ವನಿಗೆ ಸಮಜಾಯಿಸಿದ್ದರು. "ನಾನೇ ಕ್ಯಾಳಬೇಕು ಅನ್ಕಂಡಿದ್ದೆ. ಆದ್ರೆ ಅವ್ನ ಕುಟ್ಟೆ ಇಂಥಾ ಯಿಷ್ಯವಾ ಮಾತಾಡಕ್ಕುಂಟಾ. ಅಡ್ಡಾಡ್ಡ ನುಂಗ್ ಆಕ್‌ಬುಡ್ತಾನೆ."

ನಂಜಯ್ಯನೋರು ಕೊಟ್ಟ ಸುದ್ದಿ ಸಟೆಯಾ? ದಿಟವಾ? ಯೆಂಬುದ ಪಾರೋತಮ್ಮೋರಿಗೆ ಅರಿಯಲಾಗಿರನಿಲ್ಲ. ಇತ್ತಿತ್ತಲಾಗಿ ಆ ಈ ಕೆಲಸಗಳೆಂದು ಮಾದಯ್ಯನೋರು ನಾಕಾರು ರಾತ್ರಿಗಳನ್ನು ವರಗೇ ಕಳದುಬುಟ್ಟಿದ್ದು ಪಾರೋತಮ್ಮೋರ

ಇರಿಸುಮುರಿಸನ್ನು ಹೆಚ್ಚು ಮಾಡಿಬುಟ್ಟಿತ್ತು. ಅಂದು ರಾತ್ರಿ ಮಾದಯ್ಯನೋರು ಕಂಬಳಿ ವದ್ದುಕೊಂಡು, ಬೆಟ್ಟದ ಕೋಲನ್ನು ಹಿಡಕೊಂಡು ಜೋಡು ಮೆಟ್ಟುತ್ತಿದ್ದಂತೆಯೇ ಪಾರೋತಮ್ಮೋರಾ ಸೈರಣೆ ಮೇರೆ ಮುಟ್ಟಿತ್ತು.

"ಇದ್ಯಾನಾ ಇದು. ಇಷ್ಟೊತ್ ರಾತ್ರಿಲಿ ಎಲ್ಲಿಗೆ ವಂಟೆ" ಪಾರೋತಮ್ಮೋರ ಪ್ರಶ್ನೆ ಮಾದಯ್ಯನೋರಿಗೆ ವಸದಾಗಿ ಕಂಡಿತ್ತು. "ಇದ್ಯಾಕವ್ವೋ ಹಿಂಗ್ ಕೇಳ್ತಯಿ? ಗದ್ದೆ ಕಾವಲಿಗೆ ಹೋಯ್ತಾ ಇವ್ನಿ."

"ಅದ್ಯಾಕ ಆಳ್‌ಮಕ್ಳು ಇಲ್ವಾ? ಅವ್ರುಗೇ ಹೇಳ್ ಕಳ್ಸು. ನೀ ಹಟ್ಟಿಯಾಗೇ ಮನಿಕ್ಕಾ." ಮಗಾ ವರಗೆ ಯಿದ್ದರೇ ಹಟ್ಟಿಗೆ ನೆಮ್ಮದಿಯೆಂದು ಅಂದುಕೊಳ್ಳುತ್ತಿದ್ದ ಪಾರೋತಮ್ಮೋರಾ ನಿಲುವು ಬದಲಾಗಿತ್ತು.

"ಆಳ್ ಮಾಡಾದು ಹಾಳೇ ಅಂತ ಕ್ಯಾಳಿಲ್ವಾ ನೀನು. ಯಿತ್ತಿತ್ತಲಾಗಿ ಯಾರ್ನ ನಂಬ್ಕಾ ಬೇಕೋ, ಯಾರ್ನ ಬುಡಬೇಕೋ ಗೊತ್ತೇ ಆಗವಲ್ದು. ಬ್ಯಾಲೀನೇ ಯೆದ್ದು ವೊಲಾ ಮೇಯಾ ಸ್ಥಿತಿ ಬಂದ್‌ಬುಟ್ಟಿದೆ."

"ನಂಗೂ ಅದೇ ಸ್ಥಿತಿ ಕ ಮಾದಾ. ಯಾರ್ ಮಾತಾ ನಂಬ್‌ಬ್ಯಾಕೋ ಯಾರ್ ಮಾತಾ ಬುಡಬೇಕೋ ತಿಳೀವಳ್ದು. ನಂಗ್ಯಾಕೋ ನೀ ಹಿಂಗೆ ಅಟ್ಟಿ ಬುಟ್ಟು ವೋಗಾದು ಸರಿ ಕಾಣ್ತಿಲ್ಲ. ವೂರೋರು ವಂದೊಂದು ಮಾತಾಡಕಂತ ಅವುರೆ. ನಂಗೂ ತಳ ಬುಡ ಗೊತ್ತಿಲ್ಲ. ಆಡೋರ ಬಾಯಿಗೆ ನಾವು ಅಡ್ಕೆ ಯಾಕ್ ಆಗಬೇಕು ಅಂತೀನಿ."

ಪಾರೋತಮ್ಮೋರ ಸೂಕ್ಷ್ಮವಾದ ನುಡಿಗಳು ಸೊಸೆಗೇನೂ ಅರ್ಥವಾಗುವಂತಿರಲಿಲ್ಲ. "ಇಗ್ಯಾಕ್ ಅತ್ತೆಯ್ಯನೋರು ಗದ್ದೆ ಕಾವಲಿಗೆ ಹ್ವಾಯ್ತಾ ಇರಾ ಮಗುನ್ನ ಹಿಡಿದು ಕೂರಿಸ್ಕತ್ತಿದ್ದಾರೂ. ಹ್ವಾಗಕ್ಕೆ ಬುಟ್‌ಬುಡಾದು ಬುಟ್ಟು" ಮನಸ್ಸಿನಲ್ಲೇ ಅಂದುಕ್ಕಂಡಿದ್ದರು.

"ಯೇಳ್ಕೆ ಮಾತ್ ಕ್ಯಾಳ್ಕಂಡು ಯಾವನೋ ಯೆಡ್ತಿನಾ ಬುಟ್ನಂತೆ... ಅಂಗೆ ಆಡ್ತಿಯಲ್ಲವೋ. ಯಾವನೋ ಏನೋ ಅಂತಾನೇ ಅಂತ ನಮ್ ಬದುಕಾ ನಾವು ಬುಡಾಕಾದಾತಾ. ಅದ್ಯಾನ್ ಯೇಳ್ ಬೇಕಂತಿದ್ದೀಯೋ ಅದ ನ್ಯಾರವಾಗಿ ಹ್ಯಾಳು. ಸುತ್ತುಬಳಸಿ ಯಾಕಂತ ಇದ್ದಯಿಽ?"

ಸಿಡಾರನೆ ಸಿಡಿದ ಮಾದಯ್ಯನೋರು ಯುದ್ಧಕ್ಕೆ ಆಹ್ವಾನ ಕೊಟ್ಟುಬಿಟ್ಟಿದ್ದರು. ಸ್ಸಸೆಯ ಮುಖವ ನೋಡಿಕೊಂತ ಕುಳಿತಿದ್ದ ಪಾರೋತಮ್ಮೋರಿಗೆ ಸುಮ್ಮನಾಗಿರಲಿಲ್ಲ. ಅವ್ವ-ಮಗನ ನಡುವೆ ದೊಡ್ಡ ರಾದ್ಧಾಂತವೇ ಆಗಿಬುಟ್ಟಿತ್ತು. ಯಾರಿಗೆ ಯಾರೂ ಸೋಲುವಂಗೆ ಇರನಿಲ್ಲ. ರಾದ್ಧಾಂತ ವುದ್ದಕ್ಕೆ ಬೆಳೀತಾ ಬೆಳೀತಾ ಹ್ವಾದಂತೆ ಮಾದೇವಮ್ಮೋರಿಗೆ, ಅತ್ತೆಯ್ಯಾರು ತಮ್ಮ ಬಡಬಾಳಿಗಾಗಿಯೇ ಈದ ವುಲಿಯಂಗೆ